## ಇರ್ಫಾನ್ ಸ್ಮರಣೆಯಲ್ಲಿ ಪತ್ನಿಯ ಭಾವುಕ ಪತ್ರ



ವರ್ಷದ ಹಿಂದೆ ನಟ ಇರ್ಫಾನ್ ನಮ್ಮನ್ನೆಲ್ಲ ಅಗಲಿದರು. ಕ್ಯಾನ್ಸರ್‌ನೊಂದಿಗೆ ವರ್ಷಗಟ್ಟಲೆ ಹೋರಾಡಿಯೂ ಅವರು ಉಳಿಯಲಿಲ್ಲ.

ಇರ್ಫಾನ್ ಪತ್ನಿ ಸುತಾಪಾ ಸಿಕ್ದರ್ ಪತಿಯ ಸ್ಮರಣೆಯಲ್ಲಿ ವರ್ಷದ ಹಿಂದೆ ಇರ್ಫಾನ್ ಕೊನೆಯ ಕ್ಷಣಗಳನ್ನು ನೆನಪಿಸಿಕೊಂಡು ಭಾವುಕ ಪತ್ರವೊಂದನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸಿದರು.

ಅದರ ಸಾರಾಂಶ ಹೀಗಿದೆ: 'ಆಳವಾಗಿ ಬದುಕುವವರಿಗೆ ಸಾವಿನ ಭಯ ಇರುವುದಿಲ್ಲ ಎಂದು ನಿನ್ನ ಇಷ್ಟದ ಕವಿ ಅನೈಸ್ ನಿನ್ ಹೇಳಿದ್ದರು. ಹೋದವರ್ಷ ಇದೇ ದಿನ ರಾತ್ರಿ ನಾನು, ಸ್ನೇಹಿತರೆಲ್ಲ ನಿನಗಾಗಿ ಹಾಡಿದ್ದೆವು. ಎಲ್ಲವೂ ನಿನಗೆ ಇಷ್ಟವಿದ್ದ ಹಾಡುಗಳು. ಸಾಮಾನ್ಯವಾಗಿ ಧಾರ್ಮಿಕ ಮಂತ್ರಪಠಣ, ಪ್ರಾರ್ಥನೆಯನ್ನೇ ನೋಡುವ ನರ್ಸ್‌ಗಳೆಲ್ಲ ಕೊನೆಯ ಗಳಿಗೆಯಲ್ಲಿ ಇಂತಹ ಹಾಡುಗಳನ್ನು ಹಾಡುತ್ತಿರುವರಲ್ಲ ಎಂದು ನಮ್ಮತ್ತ ಅಚ್ಚರಿಯ ನೋಟ ಬೀರಿದ್ದರು. ನಾನು ಎರಡು ವರ್ಷ ನಿನಗಾಗಿ ಹಗಲು–ಸಂಜೆ–ರಾತ್ರಿ ಅಂತಹ ಎಷ್ಟೋ ಪ್ರಾರ್ಥನೆಗಳನ್ನು ನಿನಗಾಗಿ ಮಾಡಿಯಾಗಿತ್ತು. ಕೊನೆಯ ಕ್ಷಣಗಳಲ್ಲಿ ನಿನ್ನಿಷ್ಟದ ನೆನಪುಗಳೊಂದಿಗೆ ಖುಷಿಯಾಗಿ ನಿನ್ನನ್ನು ಕಳುಹಿಸೋಣ ಎಂದುಕೊಂಡು ಅಷ್ಟೆಲ್ಲ ಹಾಡಿದೆವು. ಮರುದಿನ ನೀನು ಮುಂದಿನ ನಿಲ್ದಾಣಕ್ಕೆ ಹೊರಟುಬಿಟ್ಟೆ. ನಾನಿಲ್ಲದೆ ಎಲ್ಲಿ ಇಳಿಯಬೇಕು ಎಂದು ನಿನಗೆ ಗೊತ್ತಿದೆಯೆಂದೇ ಭಾವಿಸಿದ್ದೇನೆ. 29ನೇ ಏಪ್ರಿಲ್ 2020ಕ್ಕೆ ಸರಿಯಾಗಿ 363 ದಿನಗಳು... ಎಂಟುಸಾವಿರದ ಏಳುನೂರಾ ಹನ್ನೆರಡು ಗಂಟೆಗಳ ನಮ್ಮ ಎಣಿಕೆ ಮುಗಿಯಿತು. ಬದುಕಿನ ಸಾಗರದಲ್ಲಿ ಈಜುವಂಥ ಸಮಯದ ಲೆಕ್ಕಾಚಾರವದು. ಗಡಿಯಾರದ ಮುಳ್ಳು 11.1ಕ್ಕೆ ಸರಿಯಾಗಿ ನಿಂತುಬಿಟ್ಟಿತು. ನಿನಗೆ ಸಂಖ್ಯೆ ಎಂದರೆ ಬಲು ಆಸಕ್ತಿ. ನೋಡು, ಕೊನೆಗೆ 'ಒಂದು ಒಂದು ಒಂದೇ' ಸಿಕ್ಕಿತು. 11/11/11ನ್ನು ಕೆಲವರು ಮಿಸ್ಟರಿ ಸಂಖ್ಯೆ ಎನ್ನುತ್ತಾರೆ'.

ಇದನ್ನು ಓದಿದ ಮೇಲೆ ಕಣ್ಣಾಲಿಗಳಲ್ಲಿ ಹನಿ ಮೂಡದೇ ಇರದು.

■ **ವಿಶಾಖ ಎನ್.**

# ಕಂಗನಾಗೆ ರಾಖಿ ಪರೋಕ್ಷ ಉಪದೇಶ



ಈಗೊಂದು ಟ್ರೆಂಡ್ ನಡೆಯುತ್ತಿದೆ, ಅದೂ ಕೋವಿಡ್ ವ್ಯಾಪಕವಾದ ಮೇಲೆ. ಸೆಲೆಬ್ರಿಟಿಗಳು ಹಾಗೂ ಹಿಂದಿ ನಟ–ನಟಿಯರು ಬೆಳಿಗ್ಗೆ ಜಿಮ್‌ಗೋ, ಈಜಿಗೋ, ಮೋಜಿಗೋ ಕಾರಿನಲ್ಲಿ ಹೊರಟರೆ ಆ ಮಾಹಿತಿ ಆಧರಿಸಿ ಫೋಟೊಗ್ರಾಫರ್‌ಗಳು ಅಂತಹ ಸ್ಥಳಗಳಿಗೆ ಹೋಗಿ ನಿಲ್ಲುವುದು. ಒಂದು ಫೋಟೊಗೆ ಪೋಸ್ ನೀಡುವಂತೆ ಅಂಗಲಾಚುವುದು. ಅವರು ನಗುವನ್ನು ಮಾಸ್ಕಿನೊಳಗಿನಿಂದಲೇ ಬಿಸಾಕಿದರೂ ಸಂತೃಪ್ತ ಭಾವದಲ್ಲಿ ಸಂತುಷ್ಟರಾಗುವುದು ನಡೆಯತೊಡಗಿದೆ.

ಮೊನ್ನೆ ರಾಖಿ ಸಾವಂತ್ ಇಂತಹುದೇ ಒಂದು ಸಂದರ್ಭದಲ್ಲಿ ಕ್ಯಾಮೆರಾ ಹಿಡಿದವರ ಕಣ್ಣಿಗೆ ಬಿದ್ದರು. ಎರಡೆರಡು ಮಾಸ್ಕ್ ಧರಿಸಿ, ಕೈಯಲ್ಲಿ ಸ್ಯಾನಿಟೈಸರ್ ಸ್ಪ್ರೇ ಹಿಡಿದಿದ್ದ ಅವರು ಮಾತಾಡುವ ಮೂಡ್‌ನಲ್ಲಿ ಇರಲಿಲ್ಲ. ಬಿಳಿ ವಸ್ತ್ರ ಧರಿಸಿ ಶಾಂತಿದೂತೆಯಂತೆ ಪ್ರಕಟಗೊಂಡಿದ್ದರು. ಫೋಟೊ ತೆಗೆದವರ ಗುಂಪಿನ ಮಧ್ಯೆ ಇದ್ದ ಸುದ್ದಿಮಿತ್ರರೊಬ್ಬರು ದೇಶಾವರಿ ಮಾತಿಗೆ ಎಳೆದರು.

'ಕಂಗನಾ ರನೋಟ್ ಮೊನ್ನೆ ಗಂಭೀರ ಪ್ರಶ್ನೆ ಎತ್ತಿದ್ದಾರೆ. ನರೇಂದ್ರ ಮೋದಿ ಅವರಂಥ ಒಳ್ಳೆಯ ಪ್ರಧಾನಿ ಇದ್ದೂ ಈಗ ಆಕ್ಸಿಜನ್‌ಗಾಗಿ ಜನ ಪರದಾಡುವಂತಾಗಿದೆ ಎಂದು ಅವರು ವಿಷಾದದ ದನಿಯಲ್ಲಿ ಹೇಳಿದ್ದಾರೆ. ಇಂತಹ ಸಮಸ್ಯೆ ಉದ್ಭವಿಸಿದಾಗ ಸೆಲೆಬ್ರಿಟಿಗಳೆಲ್ಲ ಏನು ಮಾಡಬೇಕು' ಎಂದು ಸುದ್ದಿಮಿತ್ರರು ಎಂದಿನ ಓಘದಲ್ಲಿ ಪ್ರಶ್ನೆ ಹಾಕಿದರು.

ರಾಖಿ ಸಾವಂತ್ ಇದನ್ನು ಕೇಳಿ ಮೊದಲಿಗೆ ಸಣ್ಣ ಕುಹಕದ ನಗೆ ನಕ್ಕರು. ಆಮೇಲೆ ಅವರು ಬಾಣವನ್ನು ಕಂಗನಾ ಕಡೆಗೇ ತಿರುಗಿಸಿಬಿಟ್ಟರು. 'ಕಂಗನಾ ಅವರ ಬಳಿ ಕೋಟಿಗಟ್ಟಲೆ ಹಣವಿದೆ. ಇಂತಹ ದುರಿತ ಕಾಲದಲ್ಲಿ ಅವರು ನೊಂದವರಿಗೆ ಸಹಾಯಹಸ್ತ ಚಾಚಬೇಕು. ಆಕ್ಸಿಜನ್ ಹಂಚಲು ಒಂದಿಷ್ಟು ಹಣಕಾಸಿನ ನೆರವು ನೀಡಬೇಕು. ಆಗ ಅವರ ಕಳಕಳಿಗೆ ನಿಜವಾದ ಅರ್ಥ ಬರುತ್ತದೆ. ನಾನೂ ನನ್ನ ಕೈಲಾದ ಸಹಾಯವನ್ನು ಕೆಲವರಿಗೆ ಮಾಡುತ್ತಿದ್ದೇನೆ...ಈ ಕೈಲಿ ಕೊಟ್ಟಿದ್ದು ಆ ಕೈಗೆ ಗೊತ್ತಾಗಬಾರದಲ್ಲವೇ' ಎಂದು ವ್ಯಂಗ್ಯ ಬೆರೆತ ಧಾಟಿಯಲ್ಲಿ ಹೇಳಿ ಕಾರು ಹತ್ತಿದರು. ರಾಖಿ ಸಾವಂತ್ ಮಾತಿನ ಬಾಣಕ್ಕೆ ಇನ್ನೂ ಕಂಗನಾ ಪ್ರತಿಬಾಣ ಹೂಡಿಲ್ಲವಷ್ಟೆ. ■

